# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 817 |
| 2. | ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 12-12-2023 |
| 4. | ಉತ್ತರಿಸುವವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ನಗರದ ಅಭಿವೃದ್ಧಿಗಾಗಿ ಸರ್ಕಾರವು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಕೈಗೊಂಡಿರುವ ಯೋಜನೆಗಳಾವುವು : ಸದರಿ ಯೋಜನೆಗಳು ಯಾವ ಹಂತದಲ್ಲಿವೆ: ಅವುಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು; | ಬೆಳಗಾವಿ ನಗರದ ಅಭಿವೃದ್ಧಿಗಾಗಿ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ.<br>**ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ)**<br>ವಿಶ್ವಬ್ಯಾಂಕ್ ನೆರವಿನ KUWSMP ಯೋಜನೆಯಡಿ ಬೆಳಗಾವಿ ನಗರದಲ್ಲಿ 24x7 ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ಅನುಷ್ಠಾನ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಜೂನ್-2020 ರಂದು ಮೆ\|\| ಎಲ್ & ಟಿ ಲಿಮಿಟೆಡ್ ಚೆನ್ನೈ ರವರಿಗೆ ರೂ.804.13 (ಕೆಪೆಕ್ಸ್ ರೂ.571.35 ಕೋಟಿ ಮತ್ತು ಒಪೆಕ್ಸ್ ರೂ.232.78 ಕೋಟಿ) ಕೋಟಿಗಳಿಗೆ ಕಾಮಗಾರಿ ಗುತ್ತಿಗೆಯನ್ನು ನೀಡಲಾಗಿದೆ.<br>ಸದರಿ ಯೋಜನೆಯ ಅವಧಿಯು ಒಟ್ಟು 12 ವರ್ಷಗಳಾಗಿದ್ದು, ಇದರಲ್ಲಿ 5 ವರ್ಷಗಳು ವಿನ್ಯಾಸ-ನಿರ್ಮಾಣ ಅವಧಿ, 7 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯು ಇರುತ್ತದೆ. ಯೋಜನೆಯ ವಿನ್ಯಾಸದ ಮುಕ್ತಾಯ ಅವಧಿಯು ಮತ್ತು ನಿರ್ಮಾಣ ಅವಧಿಯು ಜೂನ್ -2025 ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯು ಜೂನ್ -2032 ಆಗಿರುತ್ತದೆ.<br>ಯೋಜನಾ ನಿಯಮಾನುಸಾರ ಗುತ್ತಿಗೆದಾರರು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯಿಂದ ಹಸ್ತಾಂತರಿಸಿಕೊಂಡು ದಿನಾಂಕ: 25.06.2021 ರಿಂದ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ.<br>ಪ್ರಸ್ತುತ ಯೋಜನೆಯಲ್ಲಿ ಕಚ್ಚಾ ನೀರು ಸರಬರಾಜು ಕೊಳವೆ, ಶುದ್ಧ ನೀರು ಸರಬರಾಜು ಕೊಳವೆ, ವಿತರಣಾ ಕೊಳವೆ ಜಾಲ, ನೀರು ಶುದ್ಧೀಕರಣ ಘಟಕಗಳು, ಮೇಲೆತ್ತರದ ಜಲಸಂಗ್ರಹಾರಗಳು, ನೆಲಮಟ್ಟದ ಜಲಸಂಗ್ರಹಾರಗಳು, ಗೃಹ ನಳ ಸಂಪರ್ಕಗಳು ಹಾಗೂ ಇನ್ನಿತರೆ ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈವರೆವಿಗೆ ಶೇ. 25% ರಷ್ಟು ಭೌತಿಕ ಪ್ರಗತಿಯನ್ನು ಗುತ್ತಿಗೆದಾರರು ಸಾಧಿಸಿರುತ್ತಾರೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಯೋಜನೆಯ ಕಾಮಗಾರಿಗಳ ಅನುಷ್ಠಾನವನ್ನು ನಿಗಧಿತ ಅವಧಿಯಲ್ಲಿ (ಜೂನ್-2025) ಮುಕ್ತಾಯಗೊಳಿಸಲು ಗುತ್ತಿಗೆದಾರರಿಗೆ ಅವಶ್ಯಕವಾದ ಎಲ್ಲಾ ವಿನ್ಯಾಸ ಹಾಗೂ ಇತರೆ ಅನುಮೋದನೆಗಳನ್ನು ನೀಡಲಾಗಿದೆ. ಇತರೆ ಇಲಾಖೆಗಳಿಂದ ಅಗತ್ಯವಾದ ನಿರಾಪೇಕ್ಷಣಾ ಪತ್ರಗಳನ್ನು ಪಡೆಯಲು ಕ್ರಮವಹಿಸಲಾಗಿದೆ. ಪ್ರತಿ ಮಾಹೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ಕೇಂದ್ರ ಕಛೇರಿಯಲ್ಲಿ ಆಯೋಜಿಸಿ ಯೋಜನೆಯಲ್ಲಿ ನಿಗದಿಪಡಿಸಿದ ಮೈಲ್‌ಸ್ಟೋನ್‌ಗಳ ಗುರಿಸಾಧನೆಗೆ ಅವಶ್ಯಕವಾದ ಮಾರ್ಗದರ್ಶನ ನೀಡಿ ಅಗತ್ಯಕ್ಕೆ ಅನುಗುಣವಾಗಿ ಮಾನವ ಸಂಪನ್ಮೂಲ, ಯಂತ್ರಗಳು ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡಲು ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕಾಲಕಾಲಕ್ಕೆ ಸೂಚನೆಗಳನ್ನು ನೀಡಿ, ಯೋಜನೆಯನ್ನು ಜೂನ್-2025 ರೊಳಗೆ ಮುಕ್ತಾಯಗೊಳಿಸಲು ಸೂಚಿಸಿ ಗುತ್ತಿಗೆದಾರರಿಗೆ ಗುತ್ತಿಗೆ ನೋಟೀಸ್‌ಗಳನ್ನು ನೀಡಲಾಗಿದೆ.<br><br>**<u>ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಅಭಿಯಾನ</u>**<br>ಕೇಂದ್ರ ಮತ್ತು ರಾಜ್ಯ ಸರ್ಕಾರ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನವು ಜೂನ್-2015 ರಂದು ಆರಂಭಗೊಂಡಿದ್ದು, ಬೆಳಗಾವಿ ನಗರವು ಅಭಿಯಾನದಡಿ ಆಯ್ಕೆಯಾಗಿರುತ್ತದೆ. ಕೆಯುಐಡಿಎಫ್‌ಸಿ ಸಂಸ್ಥೆಯನ್ನು ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ನೋಡಲ್ ಸಂಸ್ಥೆಯನ್ನಾಗಿ ನೇಮಿಸಲಾಗಿರುತ್ತದೆ.<br>• ಯೋಜನಾ ಅನುಷ್ಠಾನಕ್ಕಾಗಿ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂಬ ವಿಶೇಷ ಉದ್ದೇಶಿತ ವಾಹನವನ್ನು ಸ್ಥಾಪಿಸಲಾಗಿರುತ್ತದೆ.<br>• ಅಭಿಯಾನದಡಿ ಬೆಳಗಾವಿ ನಗರಕ್ಕೆ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ರೂ.490 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ.441 ಕೋಟಿಯಂತೆ ಒಟ್ಟಾರೆ ರೂ.931 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.<br>• ಸ್ಮಾರ್ಟ್ ಸಿಟಿ ಯೋಜನೆಯಡಿ ಬೆಳಗಾವಿ ನಗರದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಪ್ರಸ್ತುತ ಪ್ರಗತಿಯ ವಿವರ ಈ ಕೆಳಗಿನಂತಿದೆ:<br>(ಅ)**<u>ಸ್ಮಾರ್ಟ್ ಸಿಟಿ ಅನುದಾನದಡಿ ಕೈಗೊಂಡ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:</u>**<br>(ರೂ.ಕೋಟಿಗಳಲ್ಲಿ) |

| ನಗರ | ಒಟ್ಟು ಕಾಮಗಾರಿಗಳು | | ಪೂರ್ಣಗೊಂಡ ಕಾಮಗಾರಿಗಳು | | ಪ್ರಗತಿಯಲ್ಲಿರುವ ಕಾಮಗಾರಿಗಳು | | |
|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | DPR ಮೊತ್ತ | ಈವರೆಗಿನ ವೆಚ್ಚ |
| ಬೆಳಗಾವಿ | 102 | 931.18 | 96 | 776.14 | 6 | 155.04 | 101.69 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
(ಆ) <u>ಪಿ.ಪಿ.ಪಿ ಮಾದರಿಯಡಿ ಕೈಗೊಂಡ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:</u><br>
(ರೂ. ಕೋಟಿಗಳಲ್ಲಿ)
<table>
<tr><th rowspan="2">ನಗರ</th><th colspan="2">ಒಟ್ಟು ಕಾಮಗಾರಿಗಳು</th><th colspan="2">ಪೂರ್ಣ ಗೊಂಡ ಕಾಮಗಾರಿ ಗಳು</th><th colspan="2">ಪ್ರಗತಿಯಲ್ಲಿ ರುವ ಕಾಮಗಾರಿ ಗಳು</th><th colspan="2">ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು</th></tr>
<tr><th>ಸಂ ಖ್ಯೆ</th><th>ಮೊತ್ತ</th><th>ಸಂ ಖ್ಯೆ</th><th>ಮೊತ್ತ</th><th>ಸಂ ಖ್ಯೆ</th><th>ಮೊತ್ತ</th><th>ಸಂ ಖ್ಯೆ</th><th>ಮೊತ್ತ</th></tr>
<tr><td>ಬೆಳಗಾವಿ</td><td>6</td><td>211.06</td><td>1</td><td>4.90</td><td>5</td><td>206.16</td><td>0</td><td>0</td></tr>
</table>
<ul><li>ಯೋಜನಾ ಅನುಷ್ಠಾನದಲ್ಲಿ ಎದುರಾಗುವ ಹಲವಾರು ಸವಾಲುಗಳಿಗೆ ಆಯಾ ಜಿಲ್ಲಾಧಿಕಾರಿಗಳು ಸಮನ್ವಯ ಸಮಿತಿ ಸಭೆಗಳ ಮೂಲಕ ಪರಿಹಾರಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.</li></ul>
ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಅಭಿಯಾನದ ಕಾಲಮಿತಿಯನ್ನು ಜೂನ್-2024 ರವರೆಗೆ ವಿಸ್ತರಿಸಿದ್ದು, ಅದರಂತೆ ಪ್ರಗತಿಯಲ್ಲಿರುವ ಒಟ್ಟು 6 ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ.
</td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳಿಂದ ಹಮ್ಮಿಕೊಂಡಿರುವ ಯೋಜನೆಗಳಾವುವು ಮತ್ತು ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿದ್ಧಪಡಿಸಿರುವ ರೂಪುರೇಷೆಗಳೇನು ?</td><td>
<u>ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕೆಯುಡಬ್ಲ್ಯೂಎಸ್ಎಂಪಿ)</u><br>
ಪ್ರಸ್ತುತ ಕುಸೆಂಪ್ ಯೋಜನೆಯಡಿ ಬೆಳಗಾವಿ ನಗರದಲ್ಲಿ 24x7 ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ಅನುಷ್ಠಾನ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು ಕೆಯುಐಡಿಎಫ್‌ಸಿ ವತಿಯಿಂದ ರೂ.804.13 ಕೋಟಿಗೆ ಯೋಜಿಸಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
</td></tr>
</table>

ಕಡತ ಸಂಖ್ಯೆ: ನಅಇ 178 ಪಿ.ಆರ್.ಜೆ 2023

11/12/2023

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು